ಅಗತ್ಯಗಳಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಈಗಾಗಲೇ 1200 ಗ್ರಾಮ ಪಂಚಾಯಿತಿಯ ವಾಚನಾಲಯಗಳನ್ನು ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ಉಳಿದಿರತಕ್ಕಂತಹ ವಿಚಾರಗಳಿಗೆ ಅಕ್ಷರಸ್ಥರ ಸಂಖ್ಯೆಯನ್ನು ನೋಡಿ ಬೇಡಿಕೆಗಳಿಗೆ ಅನುಗುಣವಾಗಿ ಗಂಥಾಲಯಗಳನ್ನು ಮಾಡುತ್ತೇವೆಂದು ಹೇಳಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುವುದರಿಂದ, ಅಯವ್ಯಯದ ಲಭ್ಯತೆ, ನೀವು ಕೇಳುವಂಥದ್ದು ಅಗತ್ಯ ನಿಜ. ಜ್ಞಾನ ಭಂಡಾರ ನಿಜ. ಆದರ ಇಲಾಖೆಯಲ್ಲಿ ಲಭ್ಯವಿರುವ ಹಣದ ಮೂಲಕವಾಗಿ ಮತ್ತು ತಾವು ಪ್ರಸ್ತಾಪ ಮಾಡಿದಂತಹ ವಿಚಾರದಲ್ಲಿ ಖಂಡಿತವಾಗಿಯೂ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಒಂದು ವೇಳೆ ಆಗದೇ ಇದ್ದರೆ ಗ್ರಾಮಪಂಚಾಯಿತಿಯ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯವರಿಗೆ ತಿಳಿಸಿ ಮಾಡಿಕೊಡುತ್ತೇವೆ.

ವಿಷಯ : ಹೊಸದುರ್ಗದ ಆಸ್ಪತ್ರೆಗಳಲ್ಲಿ ನಾಯಿ ಕಡಿತಕ್ಕೆ ಲಸಿಕೆ ಸರಬರಾಜು

217 (1961)-ಶ್ರೀ ಟಿ. ಹೆಚ್. ಬಸವರಾಜ್ (ಹೊಸದುರ್ಗ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕರ್ನಾಟಕ ರಾಜ್ಯದಲ್ಲಿ ನಾಯಿಗಳ (ಹುಚ್ಚುನಾಯಿ) ಕಡಿತಕ್ಕೆ ಲಸಿಕೆ ತಯಾರಿಸುವ ಘಟಕಗಳು ಎಷ್ಟು? ಈ ಲಸಿಕೆ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಪರ್ಯಾಯ ಯೋಜನೆ ಏನು?

ಆ) ಬೆಳಗಾವಿ ಘಟಕದಲ್ಲಿ ಲಸಿಕೆಯ ತಯಾರಿಕೆ ನಿಂತಿರುವುದಕ್ಕೆ ಕಾರಣಗಳೇನು?

ಇ) ಹೊಸದುರ್ಗ ಕ್ಷೇತ್ರದಲ್ಲಿರುವ ಆಸ್ಪತ್ರೆಗಳಿಗೆ ಲಸಿಕೆ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.)

ಅ) ಹುಚ್ಚುನಾಯಿ ಕಡಿತ ರೋಗ ನಿರೋಧಕ ಲಸಿಕೆಯನ್ನು ತಯಾರಿಸುವ ಘಟಕವು ಕರ್ನಾಟಕ ರಾಜ್ಯದಲ್ಲಿ ಒಂದು ಮಾತ್ರ ಇದ್ದು ಅದು ಬೆಳಗಾವಿಯಲ್ಲಿ ಇದೆ.

ಆ) 1996ರ ನವೆಂಬರ್ ತಿಂಗಳಿನಲ್ಲಿ ಮತ್ತು ಡಿಸೆಂಬರ್ ತಿಂಗಳಿನ ಮಧ್ಯಭಾಗದವರೆಗಿನ ಅವಧಿಯಲ್ಲಿ ಸದರಿ ಲಸಿಕೆಯು ಕೇಂದ್ರೀಯ ಔಷಧ ಪ್ರಯೋಗಾಲಯ, ಕಸೌಲಿಯಿಂದ ಬರುವಾಗ ವಿಳಂಬವಾಗಿದ್ದರಿಂದ ಲಸಿಕೆಯ ಅಭಾವ ತಲೆದೋರಿತ್ತು. ಆವಾಗ ಹಾಫಕಿನ್ಸ ಸಂಸ್ಥೆ, ಮುಂಬೈಯಿಂದ ತಮ್ಮ ತಮ್ಮ ಬೇಡಿಕೆಗಳನ್ನು ನೇರವಾಗಿ ಪಡೆದು ಕುಟುಂಬ

ಕಲ್ಯಾಣಾಧಿಕಾರಿಗಳಿಗೆ ಮತ್ತು ಜಿಲ್ಲಾ ಆಸ್ಪತ್ರೆಗಳ ಜಿಲ್ಲಾ ಸರ್ಜನ್ನರಿಗೆ ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿಗೆ ಸುತ್ತೋಲೆ ಮೂಲಕ ತಿಳಿಸಲಾಗಿತ್ತು.

ಲಸಿಕೆ ಸಂಸ್ಥೆ, ಬೆಳಗಾವಿಯಲ್ಲಿ ಲಸಿಕೆ ತಯಾರಿಕೆಯು ಯಾವಾಗಲೂ ನಿಂತಿರುವುದಿಲ್ಲ. ಆದರೆ, ಭಾರತ ಸರ್ಕಾರದ ಹಾಗೂ ಕರ್ನಾಟಕ ಸರ್ಕಾರದ ಔಷಧ ನಿಯಂತ್ರಣ ಅಧಿಕಾರಿಗಳ ನಿರ್ದೇಶನಗಳ ಮೇರೆಗೆ ಲಸಿಕೆಯ ಉತ್ಪಾದನೆಯ ಪ್ರತಿ ಬ್ಯಾಚ್ ಕೂಡ ಹಿಮಾಚಲ ಪ್ರದೇಶದಲ್ಲಿ ಕಸೌಲಿಯಲ್ಲಿರುವ ಕೇಂದ್ರಿಯ ಔಷಧ ಪ್ರಯೋಗಾಲಯದಿಂದ ಗುಣಮಟ್ಟ ಪರೀಕ್ಷೆಗೆ ಒಳಪಡಬೇಕಾಗಿದ್ದುದರಿಂದ ಮೇಲಿನ ಅವಧಿಯಲ್ಲಿ ಲಸಿಕೆಯ ಪೂರೈಕೆಯಲ್ಲಿ ವ್ಯತ್ಯಯವುಂಟಾಗಿತ್ತು.

ಹೊಸದುರ್ಗದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಡಿಸೆಂಬರ್ 1996ರಲ್ಲಿ ಒಟ್ಟು 18 ವಯಲಗಳಷ್ಟು ಲಸಿಕೆ ಪೂರೈಕೆ ಆಗಿದೆ ಹಾಗೂ ಚಿತ್ರದುರ್ಗ ಜಿಲ್ಲೆಯ ಜಿಲ್ಲಾ ಸರ್ಜನ್ನರಿಗೆ ಮತ್ತು ಎಲ್ಲಾ ಸಾರ್ವಜನಿಕ ಆಸ್ಪತ್ರೆಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳಿಗೆ ಸರಬರಾಜು ಮಾಡಿದ ಲಸಿಕೆಯ ಪ್ರಮಾಣ ಹೀಗಿದೆ.

ಅಕ್ಟೋಬರ್ 96 - 117 ವಯಲಗಳು

ಡಿಸೆಂಬರ್ 96 - 108 ವಯಲಗಳು

ಜನವರಿ 97 - 370 ವಯಲಗಳು

ಫೆಬ್ರವರಿ 1997 ರಿಂದ ಜಿಲ್ಲೆಯ ಒಟ್ಟು ಪ್ರಮಾಣವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಮತ್ತು ಜಿಲ್ಲಾ ಸರ್ಜನ್ನರಿಗೆ ಸರಬರಾಜು ಮಾಡಲಾಗಿದ್ದು ಅವರಿಗೆ ತಮ್ಮ ಅಧೀನದಲ್ಲಿ ಬರುವ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಮರುಹಂಚಿಕೆ ಮಾಡಲು ತಿಳಿಸಲಾಗಿದೆ. ಫೆಬ್ರವರಿ 1997ರಲ್ಲಿ ಚಿತ್ರದುರ್ಗ ಜಿಲ್ಲೆಗೆ ಸರಬರಾಜು ಮಾಡಿದ ಲಸಿಕೆಯ ಪ್ರಮಾಣ 420 ವಯಲಗಳಾಗಿದೆ.

ಶ್ರೀ ಟಿ. ಎಚ್. ಬಸವರಾಜು : ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಜನಸಂಖ್ಯೆ ಎಷ್ಟು ಜಾಸ್ತಿ ಇದೆಯೋ ಅದೇ ಸಂಖ್ಯೆಯಲ್ಲಿ ನಾಯಿಗಳು ಸಹ ಜಾಸ್ತಿ ಇದೆ. ನಮ್ಮ ಹೊಸದುರ್ಗ ತಾಲ್ಲೂಕಿನಲ್ಲಿ ನಾಯಿ ಕಡಿದಾಗ ಕೊಡತಕ್ಕಂತಹ ಲಸಿಕೆ ಅಭಾವ ಜಾಸ್ತಿ ಇದೆ. ನಮ್ಮ ಪಟ್ಟಣ ಪಂಚಾಯ್ತಿಯಿಂದ 8,000 ರೂ. ಗಳ ಆರೋಗ್ಯ ಇಲಾಖೆಗೆ ಕೊಟ್ಟರೂ ಸಹ ಅದನ್ನು ತರಿಸಿಕೊಳ್ಳುವಂತಹ ವ್ಯವಸ್ಥೆಯೂ ಕೂಡ ನಮಗೆ ಸಿಕ್ಕಿಲ್ಲ. ಹೀಗಾಗಿ ಹುಚ್ಚು ನಾಯಿ ಕಡಿತಕ್ಕೆ ಒಳಗಾದವರ ಸಂಖ್ಯೆ ಜಾಸ್ತಿಯಾಗಿದೆ. ಆದುದರಿಂದ ಸುಲಭವಾಗಿ

ಲಸಿಕೆಯು ಸಿಗುವಂತಹ ವ್ಯವಸ್ಥೆಯ ಮಾರ್ಗ ಸೂಚಿಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಎ. ಆರ್. ವಿ. ಷಾರ್ಟ್ ಸಪ್ಲೈ ಆಗಬಾರದು ಹಾಗೆ ಕ್ರಮವನ್ನು ತೆಗೆದುಕೊಳ್ಳಿ

ಶ್ರೀ ಹೆಚ್. ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, 1996ರ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಬೆಳಗಾಂದಲ್ಲಿರತಕ್ಕಂತಹ ವ್ಯಾಕ್ಸಿನ್ ಉತ್ಪದಾನೆಯ ಘಟಕವನ್ನು ಕೇಂದ್ರ ಡ್ರಗ್ ಕಂಟ್ರೋಲರ್ ಮತ್ತು ರಾಜ್ಯ ಡ್ರಗ್ ಕಂಟ್ರೋಲ್‌ನವರು ಕ್ವಾಲಿಟಿ ಟೆಸ್ಟ್ ಮಾಡಬೇಕೆಂದು ಕೇಳಿ ತಾತ್ಕಾಲಿಕವಾಗಿ ಆ ಉತ್ಪಾದನೆಯ ಘಟಕವನ್ನು ನಿಲ್ಲಿಸಲಾಗಿತ್ತು. ಡ್ರಗ್ ಕಸೌಲಿಯ ಕ್ವಾಲಿಟಿ ಟೆಸ್ಟಂಗೆ ಸಂಸ್ಥೆಗೆ ಟೆಸ್ಟಿಂಗ್‌ಗಾಗಿ ಕಳುಹಿಸಿ ಅದು ಈಗ ಉತ್ತಮವಾಗಿದೆಂದು ಹೇಳಿದ ಮೇಲೆ ಅದರ ಉತ್ಪಾದನೆಯು ಶುರುವಾಗಿದೆ ಅದನ್ನು ಕೊಡುತ್ತಿದ್ದೇವೆ. 420 ವೈಲ್ಸ್‌ನ್ನು ಅವರ ಕ್ಷೇತ್ರಕ್ಕೆ ಸಪ್ಲೈ ಮಾಡಿದ್ದೇವೆ. ಮತ್ತು ಇದರ ಲೈಫ್ ಸ್ಪ್ಯಾನ್ ಕೇವಲ 6 ತಿಂಗಳು ಇರುವುದರಿಂದ, ಸುಮ್ಮನೆ ತೆಗೆದುಕೊಂಡು ಶೇಖರಣೆಯನ್ನು ಮಾಡಿದರೆ ಸರ್ಕಾರಕ್ಕೂ ಕೂಡ ನಷ್ಟವಾಗುತ್ತದೆ. ಆದರೂ ಕೂಡ ಒಂದು ಎಸೆನ್‌ಷಿಯಲ್ ಡ್ರಗ್ಸ್ ಪಾಲಿಸಿ ಮಾಡಬೇಕೆಂದು..

MR. SPEAKER : Either you see that the drug is not in short supply or you take care on behalf of the Government to see those made dogs do not bite anybody

DR M. MAHADEVAPPA : The latter becomen difficult.

MR. SPEAKER : Then you do the first one.

ಶ್ರೀ ಹೆಚ್. ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಹಣ ಕೊಟ್ಟರೂ ಆ ಲಸಿಕೆ ಸಿಗುತಿಲ್ಲ.

ಅಧ್ಯಕ್ಷರು : ನಿಮಗೆ ಇನ್ನು ಮುಂದೆ ಹೊಸದುರ್ಗದಲ್ಲಿ ಆ ಔಷಧಿಯ ಕೊರತೆ ಇಲ್ಲದಂತೆ ಅವರು ಮಾಡುತ್ತಾರೆ. ನಾನು ಏನು ಹೇಳಿದೆ ಎಂದರೆ ಇಲ್ಲ ಔಷಧಿಯನ್ನು ಸಪ್ಲೈ ಮಾಡಿ, ಇಲ್ಲ ಹುಚ್ಚು ನಾಯಿಗಳು ಯಾರಿಗೂ ಕಡಿಯದಂತೆ ವ್ಯವಸ್ಥೆಯನ್ನು ಮಾಡಿ ಎಂದು ಮಂತ್ರಿಗಳಿಗೆ ಹೇಳಿದೆ, ಅದಕ್ಕೆ ಅವರು ಕಡಿಯದಂತೆ ಮಾಡುವ ವ್ಯವಸ್ಥೆ ಸಾಧ್ಯವಿಲ್ಲವೆಂದಾಗ, ಮೊದಲಿನ ವ್ಯವಸ್ಥೆಯನ್ನು ಮಾಡಿ ಎಂದು ಹೇಳಿದ್ದೇನೆ.